1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

**ಕ್ರಿ ಮೊ ಸಂಖ್ಯೆ 684/2014**

ಪಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

-ವಿರುದ್ಧ-

ಆರೋಪಿ/ತರು ಃ 1. ಎಂ ಸೀತಾರಾಮ ಬಿನ್ ಮರಿಯಪ್ಪ

2. ಕೆ.ರಾಮಯ್ಯ , ಕಾರ್ಯದರ್ಶಿ

ದಂ.ಪ್ರ.ಸಂ. ಕಲಂ **313** ರಡಿಯಲ್ಲಿ ಆರೋಪಿಯ ವಿಚಾರಣಾ ಹೇಳಿಕೆ

ಪ್ರಶ್ನೆ-1ಃ ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?
ಉತ್ತರ ಃ ಹೌದು

ಪ್ರಶ್ನೆ-2ಃ ಪ್ರಾಸಾ-1 ಕೆ.ಹೆಚ್.ಶಿವಕುಮಾರ್, ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 12.09.2013 ರಿಂದ 11.05.2015 ರವರೆಗೆ ತಾನು ತರೀಕೆರೆ ತಾಲ್ಲೂಕಿನಲ್ಲಿ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-3 ಃ ಪ್ರಾಸಾ-1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಸಂದರ್ಭದಲ್ಲಿ ತರೀಕೆರೆ ತಾಲ್ಲೂಕು ಹೋಬಳಿಯ ಅರಸೀಕೆರೆ ಗ್ರಾಮದ ಸರ್ವೆ ನಂ.7/ಪಿ2 ರಲ್ಲಿ 357 ಎಕರೆ ಪ್ರದೇಶವಿದ್ದು ಅದರಲ್ಲಿ 257 ಎಕರೆ ಕೃಷಿ ವಿಶ್ವವಿದ್ಯಾನಿಲಯಕ್ಕೂ ಹಾಗೂ 100 ಎಕರೆ ಕಂದಾಯ ಇಲಾಖೆಯ ಹೆಸರಿನಲ್ಲಿ ಪಹಣಿ ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-4 ಃ ಪ್ರಾಸಾ-1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಭೂಮಿಯಲ್ಲಿ ಸೀತಾರಾಮ್ ರವರು 35 ಇಂಟು 70 ಅಡಿ ವಿಸ್ತೀರ್ಣದ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಗ್ರಾಮ ಪಂಚಾಯಿತಿಯ ಪಿ.ಡಿ.ಓ. ಜೊತೆ ಶಾಮೀಲಾಗಿ ಅಕ್ರಮವಾಗಿ ಖಾತೆಯನ್ನು ತಮ್ಮ ಹೆಸರಿನಲ್ಲಿ ಮಾಡಿಕೊಂಡಿರುವುದು ತನ್ನ ಗಮನಕ್ಕೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-5 ಃ ಪ್ರಾಸಾ-1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತದನಂತರ ಈ ಒತ್ತುವರಿಯನ್ನು ತೆರವುಗೊಳಿಸಲು ಭೂ ಕಂದಾಯ ಕಾಯ್ದೆ 192(ಎ) ಅಡಿಯಲ್ಲಿ ತೆರವುಗೊಳಿಸಲು ದಿನಾಂಕ 30.11.2013 ರಂದು ನೋಟೀಸನ್ನು ಸದರಿ 3 ಜನರಿಗೂ ನೀಡಿರುತ್ತೇನೆ, ತದನಂತರ ದಿನಾಂಕ 05.12.2013 ರಂದು ತಾಲ್ಲೂಕು ಸರ್ವೆಯರ್ ಮೂಲಕ ಅಳತೆ ಮಾಡಿಸಿ ಒತ್ತು ಮಾಡಿರುವುದನ್ನು ತಾನು ದೃಢಪಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-6 ಃ ಪ್ರಾಸಾ-1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರುಗಳು ಒತ್ತುವರಿಯನ್ನು ತೆರವುಗೊಳಿಸದಿದ್ದಾಗ ದಿನಾಂಕ 04.03.2014 ರಂದು ಹೊರದೂಡಲ್ಪಟ್ಟ ಆದೇಶವನ್ನು ಮಾಡಿರುತ್ತೇನೆ, ದಿನಾಂಕ 05.03.2014 ರಂದು ಲಕ್ಕವಳ್ಳಿ ಪೊಲೀಸ್ ಸಬ್ ಇನ್ಸ್ಪೆಕ್ಟರ್ ಗೆ ಸದರಿ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಲಿಖಿತವಾಗಿ ಕೋರಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-7 ಃ ಪ್ರಾಸಾ-2 ಲಕ್ಷ್ಮಣನಾಯ್ಕ ಗ್ರಾಮ ಲೆಕ್ಕಾಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 14.03.2014 ರಂದು ಚಾಸಾ-1 ರವರು ನೀಡಿದ ಪಿರ್ಯಾದನ್ನು ಲಕ್ಕವಳ್ಳಿ ಪೊಲೀಸ್ ಠಾಣೆಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-8 ಃ ಪ್ರಾಸಾ-3 ಕಲ್ಲುಮರುಳಪ್ಪ, ರಾಜಸ್ವ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 15.03.2014 ರಂದು ಬಾವಿಕೆರೆ ಕೋರೆಯಲ್ಲಿರುವ ಅರಸೀಕೆರೆ ಗ್ರಾಮದ ಸರ್ವೆ ನಂ.7/ಪಿ2 ರಲ್ಲಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿರುವ ಬಗ್ಗೆ ಬೆಳಿಗ್ಗೆ 11.30 ರಿಂದ 12.00 ಗಂಟೆಯವರೆಗೆ ಪೊಲೀಸರು ಮಹಜರು ಮಾಡಿದ್ದು ತಾನು ಸ್ಥಳ ತೋರಿಸಿರುತ್ತೇನೆ, ಉಳಿದಂತೆ ಸಾರ್ವಜನಿಕರು ಮಹಜರು ಸಮಯದಲ್ಲಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-9 ಃ ಪ್ರಾಸಾ-4 ಡಿ.ಜಗದೀಶ್, ಗ್ರಾಮಲೆಕ್ಕಾಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 15.03.2014 ರಂದು ಬಾವಿಕೆರೆ ಕೋರೆಯಲ್ಲಿರುವ ಅರಸೀಕೆರೆ ಗ್ರಾಮದ ಸರ್ವೆ ನಂ.7/ಪಿ2 ರಲ್ಲಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿರುವ ಬಗ್ಗೆ ಬೆಳಿಗ್ಗೆ 11.30 ರಿಂದ 12.00 ಗಂಟೆಯವರೆಗೆ ಪೊಲೀಸರು ಮಹಜರು ಮಾಡಿದ್ದು ತಾನು ಸ್ಥಳ ತೋರಿಸಿರುತ್ತೇನೆ, ಉಳಿದಂತೆ ಸಾರ್ವಜನಿಕರು ಮಹಜರು ಸಮಯದಲ್ಲಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-10 ः ಪ್ರಾಸಾ-5 ಎಸ್.ಗಂಗಾಧರಪ್ಪ, ಸರ್ವೆಯರ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 05.12.2013 ರಂದು ಸರ್ವೆ ನಂ.7, ಹೊಸ ನಂ.3 ರಲ್ಲಿ ಸರ್ಕಾರಿ ಜಾಗ ಒತ್ತುವರಿಯಾದ ಬಗ್ಗೆ ತಹಶೀಲ್ದಾರರ ನಿರ್ದೇಶನದ ಮೇರೆಗೆ ನಕಾಶೆಯನ್ನು ನಿಪಿ-5 ರಂತೆ ತಯಾರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ः ಸುಳ್ಳು

ಪ್ರಶ್ನೆ-11 ः ಪ್ರಾಸಾ-7 ಕೆ.ಚನ್ನಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ, ತನಗೆ ಆರೋಪಿತರಾದ ನೀವು ಗೊತ್ತು, ಆರೋಪಿತರಾದ ನೀವು ಅಕ್ರಮವಾಗಿ ಅಸೆಸ್ಮೆಂಟ್ ನ್ನು ಬರೆಸಿಕೊಂಡಿದ್ದರು, ತಾನು 2014 ರಲ್ಲಿ ತರೀಕೆರೆಗೆ ಬಂದಿದ್ದಾಗ ಸೈಟು ಮಾರಾಟಕ್ಕಿದೆ ಎಂದು ಜನರು ಹೇಳಿದರು, ಪಂಚಾಯಿತಿ ಕಚೇರಿಯಲ್ಲಿ ಅಸೆಸ್ಮೆಂಟ್ ನೋಡಿದಾಗ ಆರೋಪಿತರಾದ ನೀವು ಅಕ್ರಮವಾಗಿ ನಿವೇಶನಗಳನ್ನು ಬರೆಸಿಕೊಂಡಿರುವುದು ತಿಳಿದು ಬಂತು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ः ಸುಳ್ಳು

ಪ್ರಶ್ನೆ-12 ः ಪ್ರಾಸಾ-7 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಜಾಗ ರೆವೆನ್ಯೂ ಜಾಗವಾಗಿದ್ದು ತಹಶೀಲ್ದಾರ್ ರವರಿಗೆ ಜಿಲ್ಲಾ ಪಂಚಾಯಿತಿಯವರಿಗೆ ಅಕ್ರಮವಾಗಿ ನಿವೇಶನಗಳನ್ನು ಆರೋಪಿತರಾದ ನೀವು ಅಂದರೆ ಸೀತಾರಾವ್, ವೆಂಕಟೇಶ್ ಮತ್ತು ಸಂದೇಶ್ ರವರು ಬರೆಸಿಕೊಂಡಿರುವುದಾಗಿ ಅರ್ಜಿಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ः ಸುಳ್ಳು

ಪ್ರಶ್ನೆ-13 ः ಪ್ರಾಸಾ-8 ಕೃಷ್ಣ ಆಲಿಯಾಸ್ ದೊಡ್ಡಮನೆ ಕೃಷ್ಣ ಇವರು ತಮ್ಮ ಸಾಕ್ಷ್ಯದಲ್ಲಿ, 2014 ಇಸ್ವಿಯಲ್ಲಿ ತಾನು ಮತ್ತು ಚಾಸಾ-6 ಬೈಕಿನಲ್ಲಿ ಬಾವಿಕೆರೆ ಕಡೆಯಿಂದ ತರೀಕೆರೆ ಕಡೆಗೆ ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಬರುತ್ತಿರುವಾಗ, ಕೃಷಿ ಇಲಾಖೆಯ ವಿಶ್ವವಿದ್ಯಾನಿಲಯದ ಹತ್ತಿರ ಇರುವ ಚಾಸಾ-8 ರವರ ಮನೆಯ ಹತ್ತಿರ ಜನರು ಗುಂಪು ಗೂಡಿದ್ದರು, ಆಗ ತಾವು ಹೋಗಿ ವಿಚಾರಿಸಲಾಗಿ, 1 ನೇ ಆರೋಪಿಯಾದ ನೀವು ಸೀತಾರಾಮು, ವೆಂಕಟೇಶ್ ರವರು ಈ ಜಾಗ ತಮ್ಮ ಹೆಸರಿಗೆ ಅಸೆಸ್ಮೆಂಟ್ ಆಗಿದ್ದು ಅದನ್ನು ಸ್ವಚ್ಛಗೊಳಿಸುತ್ತಿದ್ದೇವೆ ಎಂದು ತಿಳಿಸಿದರು, ಅರಸೀಕೆರೆ ಅಸೆಸ್ಮೆಂಟ್ ಸಂಖ್ಯೆ 2/ಬಿ,ಸಿ,ಡಿ ಎಂದು ನಮೂದಿಸಿದ ಅಸೆಸ್ಮೆಂಟ್ ಕಾಪಿಯನ್ನು ತಮಗೆ ಅವರು ತೋರಿಸಿದರು, ಆಗ ಸದರಿ ಕಾಪಿಯನ್ನು ತಾನು ಗ್ರಾಮಪಂಚಾಯತಿ ಕಛೇರಿಗೆ ಹೋಗಿ ತಾಳೆ ನೋಡಿ ಪರಿಶೀಲಿಸಲಾಗಿ, ಸದರಿ 2/ ಬಿ,ಸಿ,ಡಿ ಎನ್ನುವ ಅಸೆಸ್ಮೆಂಟ್ ಸಂಖ್ಯೆಯನ್ನು ಅಕ್ರಮವಾಗಿ, ಕಾನೂನು ಬಾಹಿರವಾಗಿ 2 ನೇ ಆರೋಪಿಯಾದ ನೀವು ನಮೂದಿಸಿರುವುದು ತಿಳಿದುಬಂದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ः ಸುಳ್ಳು

ಪ್ರಶ್ನೆ-14 ः ಪ್ರಾಸಾ-8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅಸೆಸ್ಮೆಂಟ್ ನಲ್ಲಿ ಅಕ್ರಮವಾಗಿ ನಮೂದಾಗಿರುವ ಬಗ್ಗೆ ತಿಳಿದ ನಂತರ ತಾನು ಚಾಸಾ-7, ಚಾಸಾ-13

ಹಾಗೂ 15 ರವರ ಜೊತೆ ಸೇರಿ ಡಿ.ಸಿ, ತಹಶೀಲ್ದಾರ್, ಇ.ಓ, ಸಿ.ಎಸ್. ಹಾಗೂ ಲೋಕಾಯುಕ್ತರಿಗೆ ಅರ್ಜಿಯನ್ನು ಸಲ್ಲಿಸಿದೆವು, ಆರೋಪಿತರಾದ ನೀವು ಅಕ್ರಮವಾಗಿ ಅಸೆಸ್ಮೆಂಟ್ ನಲ್ಲಿ ನಮೂದಿಸಿ ತಮ್ಮ ಜಾಗ ಎಂದು ಹೇಳುತ್ತಿದ್ದ ಜಾಗವು ಕೃಷಿ ಇಲಾಖೆಗೆ ಸೇರಿದ್ದು ಅವುಗಳ ವಿಸ್ತೀರ್ಣ ಸೀತಾರಾಮು ರವರಿಗೆ ಅಂದರೆ 1 ನೇ ಆರೋಪಿಯಾದ ನಿಮಗೆ 40 ಇಂಟು 70, ವೆಂಕಟೇಶ್ ರವರಿಗೆ 25 ಇಂಟು 70, ಸಂದೇಶ್ ಶೆಟ್ಟಿ ರವರಿಗೆ 35 ಇಂಟು 70 ವಿಸ್ತೀರ್ಣದ ಜಾಗಗಳನ್ನು ಪಿ.ಡಿ.ಓ ರವರು ಬರೆದುಕೊಟ್ಟಿದ್ದರು, ತಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-15 ಃ ಪ್ರಾಸಾ-9 ಖಲಂದರ್ ಖಾನ್ ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ತಮ್ಮ ಮನೆಯ ಪಕ್ಕದಲ್ಲಿರುವ ಅರಸೀಕೆರೆಯ ಸರ್ವೆ ನಂ.7 ರಲ್ಲಿ ಸರ್ಕಾರಿ ಜಮೀನನ್ನು ಅಕ್ರಮವಾಗಿ ನಿವೇಶನಗಳನ್ನಾಗಿ ಮಾರ್ಪಡಿಸಿರುತ್ತೀರಿ, ಆರೋಪಿತರಾದ ಸಂದೇಶ ಶೆಟ್ಟಿ ಹಾಗೂ ವಸಂತಕುಮಾರ್, ವೆಂಕಟೇಶ ರವರು ನಿವೇಶನಗಳನ್ನಾಗಿ ಮಾರ್ಪಡಿಸಿ, ಮಂಡಲ ಪಂಚಾಯ್ತಿಯಲ್ಲಿ ಕಾರ್ಯದರ್ಶಿಯಾಗಿದ್ದ 2 ನೇ ಆರೋಪಿಯಾದ ನೀವು ಸದರಿ ನಿವೇಶನಗಳನ್ನು ಮಂಜೂರಿ ಮಾಡಿಕೊಡುವಂತೆ ಅಕ್ರಮವಾಗಿ ಸಹಿ ಪಡೆದುಕೊಂಡಿರುತ್ತಾರೆ, ತಾನು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-16 ಃ ಪ್ರಾಸಾ-9 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಸರ್ವೆ ನಂಬರಿನಲ್ಲಿ ತನಗೆ ಮತ್ತು ಚಾಸಾ-8, ಪೀರ್ ಖಾನ್, ಅಲ್ಲಾಭಕ್ಷ್, ಖುಲ್ಸಂ ಹಾಗೂ ವೆಂಕಾಬೋವಿ ಬಿನ್ ಬಸವಾಬೋವಿ ರವರಿಗೆ ತಲಾ 3 ಎಕರೆ 1962 ನೇ ಸಾಲಿನಲ್ಲಿ ಮಂಜೂರಿ ಮಾಡಿರುತ್ತಾರೆ, 1964 ನೇ ಸಾಲಿನಲ್ಲಿ ದುರಸ್ಥಿಯಾಗಿರುತ್ತದೆ, ತಾವು 1971 ನೇ ಸಾಲಿನಲ್ಲಿ ಸದರಿ ಜಮೀನಿಗೆ ಕಂದಾಯ ಕಟ್ಟಿರುತ್ತೇವೆ, ಸದರಿ ಜಮೀನು 1976 ರಲ್ಲಿ ಕೃಷಿ ಇಲಾಖೆಗೆ ಹಸ್ತಾಂತರಿಸಲಾಗಿದೆ ಎಂದು ಸದರಿ ಜಮೀನುಗಳನ್ನು ಬಿಡಬೇಕೆಂದು ತಿಳಿಸಿರುತ್ತಾರೆ, ಪೋಲೀಸರಿಗೆ ತಾನು ಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-17 ಃ ಪ್ರಾಸಾ-10 ಜ್ಯೋತಿಲಕ್ಷ್ಮಿ ಇವರು ತಮ್ಮ ಸಾಕ್ಷ್ಯದಲ್ಲಿ, ತಾನು 2010 ರಿಂದ 2015 ರವರೆಗೆ ಬಾವಿಕೆರೆ ಗ್ರಾಮ ಪಂಚಾಯ್ತಿಯ ಅಧ್ಯಕ್ಷಳಾಗಿದ್ದೆನು, 2 ನೇ ಆರೋಪಿಯಾದ ರಾಮಯ್ಯ ನೀವು ಸದರಿ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಆಗಿದ್ದಿರಿ, 1 ನೇ ಆರೋಪಿಯಾದ ಸೀತಾರಾಮ ನೀವು ತಾಲ್ಲೂಕು ಪಂಚಾಯ್ತಿಯ ಸದಸ್ಯರಾಗಿದ್ದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-18 ಃ ಪ್ರಾಸಾ-10 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 3 ಜನ ಆರೋಪಿತರು ಬಾವಿಕೆರೆಯ ಅರಸೀಕೆರೆಯಲ್ಲಿರುವ ತೋಟಗಾರಿಕೆ ಇಲಾಖೆಗೆ ಸೇರಿದ ಜಾಗವನ್ನು

ನಿಮ್ಮ ಹೆಸರಿನಲ್ಲಿ ಮಾಡಿಸಿಕೊಂಡಿರುತ್ತೀರಿ, ಸದರಿ ವಿಷಯವು ತಮ್ಮ ಗಮನಕ್ಕೆ ಒಂದು ವಾರದ ನಂತರ ಬಂದಿರುತ್ತದೆ, ಅಸೆಸ್‌ಮೆಂಟನ್ನು ಗ್ರಾಮಪಂಚಾಯ್ತಿ ಕಾರ್ಯದರ್ಶಿಯಾದ 2 ನೇ ಆರೋಪಿಯಾದ ನೀವು ಅಸೆಸ್‌ಮೆಂಟ್ ಪುಸ್ತಕದಲ್ಲಿ ನಮೂದಿಸಿರುತ್ತೀರಿ ತಾವು ಕಾರಣ ಕೇಳಿ 2 ನೇ ಆರೋಪಿಯಾದ ನಿಮಗೆ ನೋಟೀಸು ನೀಡಿರುತ್ತೇವೆ, 2 ನೇ ಆರೋಪಿಯಾದ ನೀವು ಸದರಿ ನೋಟೀಸಿಗೆ ಉತ್ತರ ನೀಡಿದ್ದು, ಅದರಲ್ಲಿ ತನಗೆ ಸೀತಾರಾಮು, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರು, ಆರೋಪಿ ಸಂದೇಶ ರವರ ತಂದೆ ವಸಂತಕುಮಾರ್, ವೆಂಕಟೇಶ್ ರವರು ಹೆದರಿಸಿ ತನಗೆ ನಮೂದು ಮಾಡಲು ಹೇಳಿರುತ್ತಾರೆ ಎಂದು ತಿಳಿಸಿರುತ್ತಾರೆ, ತಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-19 ಃ ಪ್ರಾಸಾ-11 ರವಿ ಇವರು ತಮ್ಮ ಸಾಕ್ಷ್ಯದಲ್ಲಿ, ಈಗ್ಗೆ ಸುಮಾರು 4-5 ವರ್ಷಗಳ ಹಿಂದೆ ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಬಾವಿಕೆರೆಯ ತಮ್ಮ ಮನೆಯ ಎದುರಿನ ಕೃಷಿ ಇಲಾಖೆಗೆ ಸೇರಿದ ಜಾಗಕ್ಕೆ ಗ್ರಾಮ ಲೆಕ್ಕಾಧಿಕಾರಿ ಜಗದೀಶ್ ಹಾಗೂ ಇತರೆ 6-7 ಜನರು ಬಂದು ಮಹಜರಿಗೆ ತನ್ನ ಸಹಿ ಪಡೆದುಕೊಂಡರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-20 ಃ ಪ್ರಾಸಾ-12 ಅಬ್ದುಲ್ ಸತ್ತಾರ್ ಇವರು ತಮ್ಮ ಸಾಕ್ಷ್ಯದಲ್ಲಿ, ಬಾವಿಕೆರೆಯ ಸರ್ವೆ ನಂ.7 ರಲ್ಲಿ ತಮ್ಮ ಮನೆ ಇರುತ್ತದೆ, ತಮ್ಮ ಮನೆಯ ಪಕ್ಕದಲ್ಲಿ ಸರ್ಕಾರಿ ಜಾಗ ಇದ್ದು, ಸದರಿ ಜಾಗಕ್ಕೆ ಸರ್ಕಾರದವರು ಕಾಂಪೌಂಡ್ ಹಾಕಿರುತ್ತಾರೆ, ಸದರಿ ಜಾಗವನ್ನು ಆರೋಪಿತರಾದ ನೀವು ಅಕ್ರಮವಾಗಿ ಹೊಡೆದುಕೊಂಡಿರುತ್ತಾರೆಂದು ಆರೋಪಿಯಾದ ನೀವು ರಾಮಯ್ಯನವರು ಪಂಚಾಯ್ತಿ ಕಾರ್ಯದರ್ಶಿ ಇದ್ದು, ಅಸೆಸ್ಮೆಂಟಿನಲ್ಲಿ ಹೆಚ್ಚುವರಿಯಾಗಿ ಹೆಸರನ್ನು ಸೇರಿಸಿರುತ್ತಾರೆಂದು, ಈಗ್ಗೆ ಸುಮಾರು 4-5 ವರ್ಷಗಳ ಹಿಂದೆ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಕೃಷಿ ಇಲಾಖೆಗೆ ಸೇರಿದ ಜಾಗಕ್ಕೆ ಗ್ರಾಮ ಲೆಕ್ಕಾಧಿಕಾರಿ ಜಗದೀಶ್ ಹಾಗೂ ಇತರೆ 6-7 ಜನರು ಬಂದು ಮಹಜರಿಗೆ ತನ್ನ ಸಹಿ ಪಡೆದುಕೊಂಡರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-21 ಃ ಪ್ರಾಸಾ-13 ಅನಿಲ್ ಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ, 2014 ನೇ ಸಾಲಿನಲ್ಲಿ ಬಾವಿಕೆರೆಯ ಪಂಚಾಯ್ತಿ ಅಭಿವೃದ್ದಿ ಅಧಿಕಾರಿಗಳು ಅಸೆಸ್‌ಮೆಂಟ್ ಪುಸ್ತಕವನ್ನು ಲಕ್ಕವಳ್ಳಿ ಪೋಲೀಸ್ ಠಾಣೆಯಲ್ಲಿ ಹಾಜರುಪಡಿಸಿದಾಗ ಪೊಲೀಸರು ವಶಪಡಿಸಿಕೊಂಡು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಮಹಜರು ಕ್ರಮ ಜರುಗಿಸಿರುತ್ತಾರೆ, ಮಹಜರು ಕಾಲಕ್ಕೆ ರಾಜೇಶ್ ಶೆಟ್ಟಿಯವರು ಇದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-22 ः ಪ್ರಾಸಾ-14 ಕೆ.ಪಾಂಡುರಂಗ, ಪಿ.ಡಿ.ಒ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16.03.2014 ರಂದು ಲಕ್ಕವಳ್ಳಿ ಪೋಲೀಸರು ಅರಸೀಕೆರೆ ಗ್ರಾಮದ ಅಸೆಸ್‌ಮೆಂಟ್ ರಿಜಿಸ್ಟರನ್ನು ಹಾಗೂ ನಡಾವಳಿ ಪುಸ್ತಕವನ್ನು ಕೊಡಲು ಕೇಳಿಕೊಂಡಿದ್ದು, ಅವರ ಕೋರಿಕೆ ಮೇರೆಗೆ ಅಸೆಸ್‌ಮೆಂಟ್ ರಿಜಿಸ್ಟರ್ ಹಾಗೂ ನಡಾವಳಿ ಪುಸ್ತಕವನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ः ಸುಳ್ಳು

ಪ್ರಶ್ನೆ-23 ः ಪ್ರಾಸಾ-14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಅಸೆಸ್ಮೆಂಟ್ ರಿಜಿಸ್ಟರ್ ಮತ್ತು ಸಭಾ ನಡಾವಳಿ ಪುಸ್ತಕವನ್ನು ಮಹಜರು ಮೂಲಕ ಪಡೆದುಕೊಂಡಿರುತ್ತಾರೆ, ಸದರಿ ಅಸೆಸ್ಮೆಂಟ್ ರಿಜಿಸ್ಟರ್ ಅರಸೀಕೆರೆ ಗ್ರಾಮಕ್ಕೆ ಸಂಬಂಧಪಟ್ಟಿರುತ್ತದೆ, ಸದರಿ ಅಸೆಸ್ಮೆಂಟ್ ರಿಜಿಸ್ಟರ್ ನಲ್ಲಿ ಪುಟ ಸಂಖ್ಯೆ 295 ರಿಂದ 488 ಸಭಾಗ ನಡಾವಳಿ ಪುಸ್ತಕ ದಿನಾಂಕ 22.11.2010 ರಿಂದ 04.09.2013 ರವರೆಗೆ ಇದ್ದು ಇದರ ಪುಟ ಸಂಖ್ಯೆ 1 ರಿಂದ 98 ರವರೆಗೆ ಪುಟಗಳಿರುತ್ತವೆ, ಇನ್ನೊಂದು ಸಭಾಗ ನಡಾವಳಿ ಪುಸ್ತಕ ದಿನಾಂಕ 04.10.2013 ರಿಂದ 24.02.2014 ರವರೆಗೆ ಪುಟ ಸಂಖ್ಯೆ 1 ರಿಂದ 36 ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ः ಸುಳ್ಳು

ಪ್ರಶ್ನೆ-24 ः ಪ್ರಾಸಾ-15 ನೇತ್ರಮ್ಮ, ಮಹಿಳಾ ಹೆಚ್.ಸಿ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 26.03.2016 ರಂದು ಬೆಳಿಗ್ಗೆ 11.00 ರಿಂದ 12.10 ರವರೆಗೆ ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ನಿವೇಶನದ ವಿಚಾರವಾಗಿ ಆರೋಪಿತರಾದ ನೀವು ದಾಖಲೆಗಳನ್ನು ದುರುಪಯೋಗಪಡಿಸಿ ಸೃಷ್ಟಿಸಿರುವ ಬಗ್ಗೆ ಚಾಸಾ-15 ಮತ್ತು 13 ರವರ ಸಮಕ್ಷಮ ಚಾಸಾ-14 ರವರು ಹಾಜರುಪಡಿಸಿದ ದಾಖಲೆಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ತಾನು ಮಹಜರನ್ನು ಬರೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ः ಸುಳ್ಳು

ಪ್ರಶ್ನೆ-25 ः ಪ್ರಾಸಾ-16 ರಾಜೇಶ್ ಶೆಟ್ಟಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20.03.2014 ರಂದು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಅಸೆಸ್‌ಮೆಂಟ್ ಮತ್ತು ನಡಾವಳಿ ಪುಸ್ತಕವನ್ನು ಅಮಾನತ್ತು ಮಾಡಿರುವ ವಿಚಾರವಾಗಿ ತಾನು ಮಹಜರಿಗೆ ಸಹಿ ಮಾಡಿರುತ್ತೇನೆ, ಆ ಸಮಯದಲ್ಲಿ ಪಂಚಾಯಿತಿಯ ಪಿ.ಡಿ.ಒ. ರವರು ಹಾಜರಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ः ಸುಳ್ಳು

ಪ್ರಶ್ನೆ-26 ः ಪ್ರಾಸಾ-17 ದೇವರಾಜ್ ನಿವೃತ್ತ ಅಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ, 2014 ರಲ್ಲಿ ಲಕ್ಕವಳ್ಳಿ ಪೊಲೀಸರು ಬಾವಿಕೆರೆ ಪಂಚಾಯಿತಿಯಲ್ಲಿ ಅಕ್ರಮವಾಗಿ ಖಾತೆ ಬದಲಾವಣೆ ಮಾಡಿರುವ ಬಗ್ಗೆ ವರದಿ ಕೇಳಿದ್ದು, ತಾನು ಕಡತವನ್ನು ಪರಿಶೀಲಿಸಿ ಪೊಲೀಸರಿಗೆ ವರದಿ ನೀಡಿರುತ್ತೇನೆ, ತಾನು ದಿನಾಂಕ 30.01.2014 ರಂದು ಬಾವಿಕೆರೆ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಕಡತವನ್ನು ಪರಿಶೀಲಿಸಿ ವಿಚಾರಣಾ

ತನಿಖಾ ವರದಿಯನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-27 ಃ ಪ್ರಾಸಾ-17 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಾನು ಪರಿಶೀಲಿಸಿದಾಗ ಅಸೆಸ್‌ಮೆಂಟ್ ಸಂಖ್ಯೆ 2 ಎ ಮತ್ತು 2 ಬಿ ನಲ್ಲಿರುವ ಬರವಣಿಗೆ ಹಾಗೂ 2 ಸಿ ಮತ್ತು 2 ಡಿ, 2 ಇ ನಲ್ಲಿ ಆಗಿರುವ ಬರವಣಿಗೆ ಹಾಗೂ ಅದರ ಮುಂದೆ ದಾಖಲಾದ ಬರವಣಿಗೆಗಳಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ, ತನ್ನ ಅಭಿಪ್ರಾಯದಲ್ಲಿ ಅಸೆಸ್ ಮೆಂಟ್ ಸಂಖ್ಯೆ 2 ಸಿ, 2 ಡಿ, 2 ಇ ಸಂಖ್ಯೆಗಳನ್ನು ಮಧ್ಯದಲ್ಲಿ ಸೇರ್ಪಡೆ ಗೊಳಿಸಿರುವುದು ಕಂಡುಬಂದಿರುತ್ತದೆ, ಸದರಿ ಸಂಖ್ಯೆಗಳು ಸಂದೇಶ್ ಶೆಟ್ಟಿ, ವೆಂಕಟೇಶ್ ಮತ್ತು ಸೀತಾರಾಮ ರವರ ಹೆಸರಿನಲ್ಲಿ ನಮೂದು ಮಾಡಿರುವುದು ಕಂಡುಬಂದಿರುತ್ತದೆ, ಸಂದೇಶ್ ಶೆಟ್ಟಿಯ ಹೆಸರಿನಲ್ಲಿ 35 ಇಂಟು 70, ವೆಂಕಟೇಶ್ ಹೆಸರಿನಲ್ಲಿ 35 ಇಂಟು 70, ಸೀತಾರಾಮ ಹೆಸರಿನಲ್ಲಿ 40 ಇಂಟು 70 ವಿಸ್ತೀರ್ಣದ ನಿವೇಶನ ನಮೂದು ಮಾಡಿರುವುದು ಕಂಡುಬಂದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-28 ಃ ಪ್ರಾಸಾ-17 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಅಸೆಸ್‌ಮೆಂಟ್ ಸಂಖ್ಯೆಗಳನ್ನು ಸೇರ್ಪಡೆ ಮಾಡಿದ್ದಕ್ಕಾಗಿ ಯಾವುದೇ ಸಭಾ ನಡವಳಿಕೆಗಳು ಆಗಿರುವ ಬಗ್ಗೆ ದಾಖಲೆಗಳು ಹಾಗೂ ಮ್ಯೂಟೇಷನ್ ದಾಖಲೆಗಳು ಸಿಕ್ಕಿರುವುದಿಲ್ಲ, ಸದರಿ ನಿವೇಶನದ ಸ್ವತ್ತುಗಳು ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತಹ ಸ್ವತ್ತುಗಳು ಎಂದು ತಿಳಿದು ಬಂದಿದೆ, ಸದರಿ ಅಂಶಗಳನ್ನು ವರದಿಯಲ್ಲಿ ತಯಾರಿಸಿ ತಾನು ಪೊಲೀಸರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-29 ಃ ಪ್ರಾಸಾ-18 ಬಿ.ಹೆಚ್.ಚಂದ್ರಶೇಖರ್ ನಿವೃತ್ತ ಎ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 14.03.2014 ರಂದು ಸಂಜೆ 07.00 ಗಂಟೆಗೆ ಚಾಸಾ-2 ರವರು ಚಾಸಾ-1 ರವರ ಲಿಖಿತ ದೂರನ್ನು ಹಾಜರುಪಡಿಸಿದ್ದು, ಅದನ್ನು ಪಡೆದು ತಾನು ಠಾಣಾ ಮೊ.ಸಂಖ್ಯೆ 55/2014 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ದಿನಾಂಕ 15.03.2014 ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ-3 ಮತ್ತು 4 ರವರು ಸ್ಥಳ ತೋರಿಸಿದಂತೆ ಚಾಸಾ-11 ಮತ್ತು 12 ರವರ ಸಮಕ್ಷಮ ಮಹಜರನ್ನು ಬೆಳಿಗ್ಗೆ 11.30 ರಿಂದ 12.00 ಗಂಟೆ ಸಮಯದಲ್ಲಿ ಜರುಗಿಸಿರುತ್ತೇನೆ, ನಂತರ ಸಾಕ್ಷಿದಾರರಾದ ಚಾಸಾ-6 ರಿಂದ 9 ರವರ ಹೇಳಿಕೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-30 ಃ ಪ್ರಾಸಾ-18 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20.03.2014 ರಂದು ಚಾಸಾ-14 ರವರು ಅಸೆಸ್‌ಮೆಂಟ್ ಪುಸ್ತಕ ಮತ್ತು ನಡವಳಿ ಪುಸ್ತಕವನ್ನು

ಠಾಣೆಗೆ ತಂದು ಹಾಜರುಪಡಿಸಿದ ಮೇರೆಗೆ ಚಾಸಾ-13 ಮತ್ತು 15 ರವರ ಸಮಕ್ಷಮ ಮಹಜರನ್ನು ಬೆಳಿಗ್ಗೆ 11.00 ರಿಂದ 12.10 ರವರೆಗೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇನೆ, ನಂತರ ಅವುಗಳನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-22 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-31 ಃ ಪ್ರಾಸಾ-19 ಪ್ರಿಯಾಂಕ ಮೇರಿ ಪ್ರಾನ್ಸಿಸ್ ಐ.ಎ.ಎಸ್.ಅಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 10.06.2014 ರಂದು ಚಾಸಾ-22 ರವರು ಮನವಿಯನ್ನು ತಮ್ಮ ಇಲಾಖೆಗೆ ಸಲ್ಲಿಸಿದ್ದು, ತಹಶೀಲ್ದಾರ್, ತರೀಕೆರೆಯವರು ದಿನಾಂಕ 14.03.2014 ರಂದು ಒಂದು ದೂರನ್ನು ಸಲ್ಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-32 ಃ ಪ್ರಾಸಾ-19 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಬಾವಿಕೆರೆ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ 2 ನೇ ಆರೋಪಿಯಾದ ನೀವು ರಾಮಯ್ಯನವರು ಬಾವಿಕೆರೆ ಗ್ರಾಮ ಪಂಚಾಯಿತಿಯ ಅರಸೀಕೆರೆ ಗ್ರಾಮದ ಸರ್ವೆ ನಂ.7/ಪಿ2 ರಲ್ಲಿ ಕೃಷಿ ಇಲಾಖೆಗೆ ಸಂಬಂಧಪಟ್ಟ ಜಮೀನನ್ನು 1 ನೇ ಆರೋಪಿಯಾದ ಸೀತಾರಾಮ್, ವೆಂಕಟೇಶ್ ಮತ್ತು ಸಂದೇಶ್ ಶೆಟ್ಟಿರವರ ಹೆಸರಿಗೆ ಅನಧೀಕೃತವಾಗಿ ಅಸೆಸ್‌ಮೆಂಟ್ ರಿಜಿಸ್ಟರ್ ನಲ್ಲಿ ಅವರ ಹೆಸರುಗಳನ್ನು ನಮೂದು ಮಾಡಿದ್ದು, ಇದರ ಬಗ್ಗೆ ಪ್ರಥಮ ವರ್ತಮಾನ ವರದಿ ದಾಖಲು ಮಾಡಿದ್ದು, ಸದರಿ ದಾಖಲೆಗಳ ಆಧಾರದ ಮೇಲೆ ತಾನು ದಿನಾಂಕ 30.07.2014 ರಂದು 2 ನೇ ಆರೋಪಿಯಾದ ನಿಮ್ಮ ಮೇಲೆ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲು ಅನುಮತಿ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-33 ಃ ಪ್ರಾಸಾ-20 ಸಿ.ಕೆ.ಮಹೇಂದ್ರಪ್ಪ ನಿವೃತ್ತ ಎ.ಎಸ್‌ಐ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 15.03.2014 ರಂದು ಚಾಸಾ-21 ರವರ ಜೊತೆ ಬಾವಿಕೆರೆ ಗ್ರಾಮಕ್ಕೆ ಭೇಟಿ ನೀಡಿದ್ದು, ಚಾಸಾ-3 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳವು ಅರಸೀಕೆರೆ ಗ್ರಾಮದ ಸರ್ವೆ ನಂ.7 ಪಿ2 ರ ಜಮೀನಾಗಿದ್ದು, ಅಲ್ಲಿಗೆ ಪಂಚರಾದ ಚಾಸಾ-11 ಮತ್ತು 12 ರವರನ್ನು ಕರೆದುಕೊಂಡು ಬಂದು ಸ್ಥಳದಲ್ಲಿ ಮಹಜರು ಕ್ರಮವನ್ನು ಮಧ್ಯಾಹ್ನ 12-00 ರಿಂದ 12-30 ಗಂಟೆಯ ವರೆಗೆ ಜರುಗಿಸಿರುತ್ತೇವೆ, ಮಹಜರನ್ನು ತಾನೇ ತನ್ನ ಕೈಬರಹದ ಮೂಲಕ ಬರೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-34 ಃ ಪ್ರಾಸಾ-21 ಕೆ.ಟಿ.ರಮೇಶ್ ಪೊಲೀಸ್ ಇನ್ಸ್‌ಪೆಕ್ಟರ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 15.03.2014 ರಂದು ಈ ಕೇಸಿನ ಕಡತವನ್ನು ಚಾಸಾ-21 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ, ಅದೇ ದಿನ ಸಾಕ್ಷಿದಾರರಾದ ಚಾಸಾ-6 ರಿಂದ 9 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ, ನಂತರ ಅನ್ಯ ಕರ್ತವ್ಯದ ಮೇರೆಗೆ ಠಾಣೆಯನ್ನು ಬಿಡಬೇಕಾಗಿದ್ದರಿಂದ ಈ ಕೇಸಿನ ತನಿಖೆಯನ್ನು ಚಾಸಾ-21 ರವರಿಗೆ ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-35 ಃ ಪ್ರಾಸಾ-21 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 26.03.2014 ರಂದು ಪ್ರಕರಣದ ಕಡತವನ್ನು ಚಾಸಾ-21 ರವರಿಂದ ಪುನಃ ಪಡೆದು ತನಿಖೆ ಮುಂದುವರಿಸಿ, ಸಾಕ್ಷಿದಾರರಾದ ಚಾಸಾ-10 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ, ದಿನಾಂಕ 16.04.2014 ರಂದು 2 ನೇ ಆರೋಪಿಯ ಕರ್ತವ್ಯಗಳ ಬಗ್ಗೆ ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನೀಡಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ತರೀಕೆರೆ ಹಾಗೂ ತಹಶೀಲ್ದಾರ್ ತರೀಕೆರೆಯವರಿಗೆ ಮನವಿ ಸಲ್ಲಿಸಿರುತ್ತೇನೆ, ಮಾನ್ಯ ತಹಶೀಲ್ದಾರ್ ರವರಿಗೆ ಅರಸೀಕೆರೆ ಗ್ರಾಮದ ಸರ್ವೆ ನಂ.7/ಪಿ2 ರಲ್ಲಿನ ದಾಖಲಾತಿಗಳನ್ನು ನೀಡಲು ಮನವಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-36 ಃ ಪ್ರಾಸಾ-21 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 10.06.2014 ರಂದು ಈ ಪ್ರಕರಣದ 2 ನೇ ಆರೋಪಿಯಾದ ನಿಮ್ಮ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರುರವರಿಗೆ ಅನುಮತಿ ನೀಡಲು ಮನವಿ ಸಲ್ಲಿಸಿರುತ್ತೇನೆ, ದಿನಾಂಕ 07.07.2014 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2 ನೇ ಆರೋಪಿಯಾದ ನಿಮಗೆ ಸಂಬಂಧಿಸಿದಂತಹ ದಾಖಲಾತಿಗಳನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ತರೀಕೆರೆ ಹಾಗೂ ತಹಶೀಲ್ದಾರ್ ತರೀಕೆರೆಯವರಿಂದ ದಾಖಲಾತಿಗಳನ್ನು ಸ್ವೀಕರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-37 ಃ ಪ್ರಾಸಾ-21 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 31.07.2014 ರಂದು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಚಿಕ್ಕಮಗಳೂರುವರು 2 ನೇ ಆರೋಪಿಯಾದ ನಿಮ್ಮ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಅನುಮತಿ ನೀಡಿದ್ದು ಅದನ್ನು ಸ್ವೀಕರಿಸಿ. ಈ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ, 1 ಮತ್ತು 2 ನೇ ಆರೋಪಿತರಾದ ನಿಮ್ಮ ವಿರುದ್ಧ ಆರೋಪ ಸಾಬೀತಾದ ಕಾರಣ 1 ಮತ್ತು 2 ನೇ ಆರೋಪಿತರಾದ ನಿಮ್ಮ ವಿರುದ್ಧ

ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-38 ಃ ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದಿದೆಯಾ?
ಉತ್ತರ ಃ ಇಲ್ಲ

ಪ್ರಶ್ನೆ-39 ಃ ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳಿದ್ದಾರಾ ಮತ್ತು ಯಾವುದಾದರೂ ದಾಖಲೆಗಳಿವೆಯಾ?
ಉತ್ತರ ಃ ಇಲ್ಲ

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕ ಃ 24.11.2025

ಸಹಿ
**(ಊರ್ಮಿಳ.ವಿ.)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ತರೀಕೆರೆ.